ಸತ್ಯಮೇವ ಜಯತೆ
ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

28ನೇ ಏಪ್ರಿಲ್ 2015

ಸನ್ಮಾನ್ಯ ಸಿದ್ದರಾಮಯ್ಯನವರೇ,

ಬೆಂಗಳೂರಿಗಾಗಿ ಮಾಸ್ಟರ್ ಪ್ಲಾನ್-2031 ಕುರಿತಂತೆ, ಇದೇ ಏಪ್ರಿಲ್ 29, ಬುಧವಾರದಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕರೆದಿರುವ ಸಾರ್ವಜನಿಕ ಸಭೆಯ ಹಿನ್ನಲೆಯಲ್ಲಿ ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಮಹಾನಗರ ಯೋಜನಾ ಸಮಿತಿಯ (ಎಂಪಿಸಿ) ಸಂವಿಧಾನದತ್ತ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನಿರ್ಲಕ್ಷಿಸಿ ಅದರ ಮೇಲೆ ಬಿಡಿಎ ಸವಾರಿ ಮಾಡಹೊರಟಿರುವ ಎರಡನೆಯ ಸನ್ನಿವೇಶ ಇದಾಗಿದೆ, ಅದೂ ಕೂಡ ಕೇವಲ ಆರು ತಿಂಗಳ ಅವಧಿಯೊಳಗೆ.

ಹೀಗೆಯೇ, 2014ರ ನವೆಂಬರ್ ತಿಂಗಳಿನಲ್ಲಿ ಕೂಡ ಮಾಸ್ಟರ್ ಪ್ಲಾನ್ ಕುರಿತ ಸಾರ್ವಜನಿಕ ಸಭೆಯನ್ನು ಕರೆದಿದ್ದ ಬಿಡಿಎ, ನಂತರ ನಾಗರಿಕರಿಂದ ಪ್ರತಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ರದ್ದುಗೊಳಿಸಿದ್ದು ತಮಗೆ ನೆನಪಿರಬಹುದು. ನಗರದ ಅಭಿವೃದ್ಧಿ ಯೋಜನೆಗಳ ನಿರೂಪಣೆಯ ಜವಾಬ್ದಾರಿ, ಸಾಂವಿಧಾನಿಕ ಸಂಸ್ಥೆಯಾದ ಎಂಪಿಸಿಯದ್ದಾಗಿದೆ ಎಂದು ಸಂವಿಧಾನದ 243 ಝಡ್-ಇ ವಿಧಿ ಸ್ಪಷ್ಟವಾಗಿ ಹೇಳಿದೆ. "ಪ್ರತಿಯೊಂದು ಮಹಾನಗರ ವ್ಯಾಪ್ತಿಯಲ್ಲಿ, ಆ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಗಳ ಕರಡನ್ನು ರಚಿಸಲು ಮಹಾನಗರ ಯೋಜನಾ ಸಮಿತಿಯು ರಚಿತವಾಗಬೇಕು" ಎಂದು ಅಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದ್ದರಿಂದ ನಗರಕ್ಕಾಗಿ ಯೋಜನಾ ಕರಡನ್ನು ನಿರೂಪಿಸಲು ಮುಂದಾಗಿರುವ ಬಿಡಿಎಯ ಈಗಿನ ಕ್ರಮ ಪ್ರಶ್ನಾರ್ಹವಾಗಿದೆ. ನಗರದ ಮಾಸ್ಟರ್ ಪ್ಲಾನ್ ಕುರಿತ ಸಾರ್ವಜನಿಕ ಸಭೆ ಕರೆಯುವ ಮೂಲಕ ಬಿಡಿಎ ಸಂವಿಧಾನಕ್ಕೆ ಅಪಚಾರವೆಸಗುತ್ತಿರುವುದು ಮಾತ್ರವಲ್ಲ, ತಾವೆ ಪದನಿಮಿತ್ತ ಅಧ್ಯಕ್ಷರಾಗಿರುವ ಒಂದು ಸಾಂವಿಧಾನಿಕ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಕೂಡ ಅತಿಕ್ರಮಿಸುತ್ತಿದೆ.

ಬಿಡಿಎ ಈ ಹಿಂದೆ ಸಿದ್ಧಪಡಿಸಿರುವ ನಗರ ಯೋಜನೆಗಳಲ್ಲಿ ನಗರ ಮತ್ತು ನಾಗರಿಕರ ಬಗೆಗಿನ ಪ್ರಾಮಾಣಿಕ ಕಾಳಜಿಗಿಂತ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವವೆ ಹೆಚ್ಚು ಕೆಲಸ ಮಾಡುತ್ತಿತ್ತು ಎಂಬ ನಂಬಿಕೆ ಸಾರ್ವಜನಿಕವಲಯದಲ್ಲಿ ಬಲವಾಗಿ ಕೇಳಿಬರುತ್ತಿದೆ. ಸಂವಿಧಾನದ ಆಶಯಕ್ಕೆ ತಕ್ಕಂತೆ ಎಂಪಿಸಿಗೆ ಕೆಲಸ ಮಾಡಲು ಬಿಡದೆ, ಬಿಡಿಎ ಇಂತಹ ಕ್ರಮಗಳಿಗೆ ಅವಕಾಶ ನೀಡಿದ್ದೇ ಆದಲ್ಲಿ, ಬಿಡಿಎ ಪಟ್ಟಭದ್ರರ ಹಿತಾಸಕ್ತಿಗಳಿಗಾಗಿ ಕೆಲಸಮಾಡುತ್ತಿದೆಯೆಂಬ ನಂಬಿಕೆಯನ್ನು ಮತ್ತಷ್ಟು ಬಲಗೊಳಿಸಿದಂತಾಗುತ್ತದೆ. ಸಂವಿಧಾನದ ೭೪ನೆಯ ತಿದ್ದುಪಡಿಯನ್ವಯ, ಎಂಪಿಸಿಯ ಸಂವಿಧಾನದತ್ತ ಅಧಿಕಾರವನ್ನು ಅತಿಕ್ರಮಿಸದೆ, ಯೋಜನಾ ನಿರೂಪಣೆಯ ಕೆಲಸವನ್ನು, ಬೆಂಗಳೂರು ಮಹಾನಗರಪಾಲಿಕೆ ಚುನಾವಣೆಯ ನಂತರ ರಚಿತಗೊಳ್ಳುವ ಎಂಪಿಸಿಗೆ ಬಿಡಬೇಕು.

2014ರ ಸೆಪ್ಟೆಂಬರ್ ತಿಂಗಳಲ್ಲಿ ಬೆಂಗಳೂರು ಮಹಾನಗರ ಯೋಜನಾ ಸಮಿತಿಯ (ಬಿಎಂಪಿಸಿ) ರಚನೆ ಒಂದು ಗಮನಾರ್ಹವಾದ ಆಡಳಿತ ಸುಧಾರಣಾ ಕ್ರಮವಾಗಿತ್ತು. ಆದರೆ ದುರ್ದೈವವೆಂದರೆ, ತಮ್ಮ ಸರ್ಕಾರ, ಆ ಸಮಿತಿ ಅಸ್ತಿತ್ವದಲ್ಲಿರುವವರೆಗೂ ಅದಕ್ಕೆ ತನ್ನ ಕರ್ತವ್ಯವನ್ನು ನಿರ್ವಹಿಸುವ ಅವಕಾಶವನ್ನೇ ನೀಡಲಿಲ್ಲ. ಒಂದು ಚುನಾಯಿತ ಎಂಪಿಸಿಯನ್ನು ರಚಿಸಲಾಯಿತಾದರೂ, ಒಮ್ಮೆಯೂ ಕೂಡ ಸಭೆ ಕರೆಯದೆ, ಅದರ 20 ಮಂದಿ ಸದಸ್ಯರಿಗೆ ಸಭೆ ಸೇರಲು ಒಂದು ಕೋಣೆಯನ್ನು ಕೂಡ ನೀಡದೆ, ತಮ್ಮ ಸರ್ಕಾರ ಅದನ್ನು ಒಂದು ನಿಷ್ಕ್ರಿಯ ಸಮಿತಿಯನ್ನಾಗಿಸಿತು.



11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680

ಸಂವಿಧಾನದ 74ನೆಯ ತಿದ್ದುಪಡಿಯ ಆಶಯ ಹಾಗು ಅಕ್ಷರಶಃ ಪಾಲನೆಯನ್ನು ಎತ್ತಿಹಿಡಿಯಬೇಕೆಂಬ ಆಸ್ಥೆಯಿದ್ದಲ್ಲಿ ಮತ್ತು ನಗರದ ಅಭಿವೃದ್ಧಿಯಲ್ಲಿ ನಾಗರಿಕರ ದನಿಗೆ ಗೌರವ ನೀಡಬೇಕೆಂಬ ಇಚ್ಛೆ ಸರ್ಕಾರಕ್ಕಿದ್ದಲ್ಲಿ, ಈ ಕೂಡಲೇ ತಾವು ಮಧ್ಯ ಪ್ರವೇಶಿಸಿ, ಬಿಡಿಎ ತನ್ನ ಕಾರ್ಯವ್ಯಾಪ್ತಿಯನ್ನು ಮೀರದೆ, ಎಚ್ಚರಿಕೆಯಿಂದ ನಡೆಯುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಈ ಮೂಲಕ ತಮ್ಮನ್ನು ಒತ್ತಾಯಿಸುತ್ತಿದ್ದೇನೆ. ಹಾಗೆಯೇ, ನಗರಪಾಲಿಕೆಯ ಚುನಾವಣೆಯ ನಂತರ ನೂತನವಾಗಿ ಆಯ್ಕೆಯಾಗುವ ಎಂಪಿಸಿಗೆ ಸ್ವತಂತ್ರವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲು ಎಲ್ಲ ರೀತಿಯ ಸೌಲಭ್ಯ ಮತ್ತು ಸಹಕಾರಗಳನ್ನು ನೀಡಿ ಮುಕ್ತ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಆಗ್ರಹಿಸುತ್ತಿದ್ದೇನೆ. ಎಂಪಿಸಿ ಈ ಮೂರು ಧ್ಯೇಯಗಳನ್ನು ಈಡೇರಿಸಿದ್ದೇ ಆದಲ್ಲಿ - (ಬಜೆಟ್ ಮತ್ತು ಮೇಲುಸ್ತುವಾರಿ ಸೇರಿದಂತೆ) ಆಡಳಿತದಲ್ಲಿ ನಾಗರಿಕ ಪಾಲುದಾರಿಕೆ, ಪ್ರಾದೇಶಿಕ ಯೋಜನಾ ನಿರೂಪಣೆ ಮತ್ತು ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಆಡಳಿತಾತ್ಮಕ ಅಧಿಕಾರ - ನಗರಾಡಳಿತದಲ್ಲಿ ನೈಜ ಸುಧಾರಣೆಗಳು ಸಾಧ್ಯವಾಗುತ್ತವೆ.

ಈಗ ಬಿಡಿಎ ಕರೆದಿರುವ ಸಾರ್ವಜನಿಕ ಸಭೆಗೆ ಎಲ್ಲೆಡೆ ವ್ಯಕ್ತವಾಗುತ್ತಿರುವ ಪ್ರತಿರೋಧಗಳು, ನಗರದ ಅಭಿವೃದ್ಧಿ ನಿರೂಪಣೆಯಲ್ಲಿ ತಮ್ಮ ಧ್ವನಿಯ ಹಕ್ಕನ್ನು ಚಲಾಯಿಸಲು ಬೆಂಗಳೂರಿನ ನಾಗರಿಕರು ಮುಂದಾಗುತ್ತಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಈಗ ನಾವು ಕಾಣುತ್ತಿರುವುದಕ್ಕಿಂತಲೂ ಉತ್ತಮವಾದ ಪರಿಸ್ಥಿತಿಗಳಿಗೆ ನಮ್ಮ ಸಮಾಜ, ನಮ್ಮ ನಗರ ಮತ್ತು ರಾಜ್ಯ ಅರ್ಹವಾಗಿವೆ. ನಾಗರಿಕರ ಸಹಭಾಗಿತ್ವದೊಂದಿಗೆ ಮುನ್ನಡೆಯುವ ಸರ್ಕಾರ ಮತ್ತು ಅದರ ಸಂಸ್ಥೆಗಳು ನಮಗೆ ಬೇಕಾಗಿದೆಯೇ ಹೊರತು ನಗರದ ನಿವಾಸಿಗಳ ಮತ್ತು ಸರ್ಕಾರದ ನಡುವೆ ಸಂಘರ್ಷಮಯ ಪರಿಸ್ಥಿತಿಗಳಲ್ಲ. ಆದ್ದರಿಂದ, ಸಂವಿಧಾನಾತ್ಮಕವಾಗಿರುವ ಎಂಪಿಸಿಯ ಗರಿಮೆಯನ್ನು ಸಂರಕ್ಷಿಸಬೇಕು ಮತ್ತು ತಮ್ಮ ಉತ್ತಮ ಆಡಳಿತದ ವಾಗ್ದಾನವನ್ನು ಪಾಲಿಸಬೇಕು ಎಂದು ಮತ್ತೊಮ್ಮೆ ತಮ್ಮನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಇಲ್ಲದಿದ್ದಲ್ಲಿ ನಾಗರಿಕ ಪ್ರತಿರೋಧವನ್ನು ತಾವು ಎದುರಿಸಬೇಕಾದೀತು.

ಈ ಕುರಿತು ತಮ್ಮ ಪ್ರತಿಕ್ರಿಯೆಗಳನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ

ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯನವರು,
ಸನ್ಮಾನ್ಯ ಮುಖ್ಯಮಂತ್ರಿಗಳು,
ವಿಧಾನಸೌಧ, ಬೆಂಗಳೂರು